

ಚಿತ್ರ : ೧೧

ಸುಂದರವಾಗಿ ಪ್ರಿಂಟ್ ಮಾಡಿಸಿ, ಮದ್ರಾಸಿನಲ್ಲಿ ನಡೆದ ಒಂದು ಚಿತ್ರಪ್ರದರ್ಶನಕ್ಕೆ ಕಳುಹಿಸಿಕೊಟ್ಟನಂತೆ.

ರಾಜಕುಮಾರನ ಶಿಕ್ಷಕರಾಗಿದ್ದ ಶ್ರೀ ಕೆ. ಸುಂದರ ಅಯ್ಯರ್ ಮತ್ತು ಅವರ ಮಗ ಶ್ರೀ ಕೆ.ಎಸ್. ರಾಮಸ್ವಾಮಿ ಶಾಸ್ತ್ರಿಗಳು ಸ್ವಾಮೀಜಿಯವರನ್ನು ಆ ಸಮಯದಲ್ಲಿ ಭೇಟಿ ಮಾಡಿದ್ದರು. ಮೇಲಿನ ವಿವರಗಳನ್ನು ನೀಡಿದ್ದು ಅವರೇ.

### ಛಾಯಾಚಿತ್ರ–೧೧

ಈ ಚಿತ್ರದಲ್ಲಿ ಸ್ವಾಮೀಜಿ ಬಹಳ ಆಕರ್ಷಕವಾಗಿ ಕಾಣುತ್ತಾರೆ. ಶಾಂತ ಮುಖಮುದ್ರೆ, ಮಿಂಚಿನಂತೆ ಮಿನುಗುವ ಕಣ್ಣುಗಳು, ಕಟ್ಟುಮಸ್ತಾದ ಶರೀರ, ತುಂಬಿಕೊಂಡ ಅಂಗಾಂಗಗಳು, ಮೈಮೇಲೆ ಕಾಷಾಯ ವಸ್ತ್ರ, ತಲೆಗೆ ಸುತ್ತಿದ ಪೇಟ – ಈ ಚಿತ್ರದ ವೈಶಿಷ್ಟ್ಯಗಳು. ಈ ಚಿತ್ರವನ್ನು ನೋಡಿ ಸ್ವಾಮೀಜಿ, 'ಡಕಾಯಿತರ ಗುಂಪಿನ ಮುಖಂಡನಂತೆ ಇದೆ' ಎಂದು ಹಾಸ್ಯವಾಗಿ ಉದ್ಗಾರ ಮಾಡಿದ್ದರು!

ಈ ಚಿತ್ರವನ್ನು ಯಾವಾಗ ಮತ್ತು ಎಲ್ಲಿ ತೆಗೆಯಲಾಯಿತು ಎಂಬುದರ ಬಗ್ಗೆ ನಿಖರವಾದ ವಿವರವಿಲ್ಲ. ರಾಜಾಸ್ಥಾನದ ಜಯಪುರದಲ್ಲಿ ೧೮೯೧ ರಲ್ಲಿ, ಬೆಳಗಾವಿಯಲ್ಲಿ ೧೮೯೨ ರಲ್ಲಿ ಅಥವಾ ಮದ್ರಾಸ್‌ನಲ್ಲಿ ೧೮೯೩ ರಲ್ಲಿ ತೆಗೆದಿರಬಹುದೆಂದು ಬೇರೆ ಬೇರೆ ಚಿತ್ರಸಂಪುಟಗಳ ಲೇಖಕರು ಬರೆದಿದ್ದಾರೆ. ಆದರೆ ಇದು '**ಬೆಳಗಾವಿಯ ಚಿತ್ರ**' ವೆಂದೇ ಪ್ರಚಲಿತವಾಗಿದೆ.

### ಛಾಯಾಚಿತ್ರ–೧೨

ಈ ಚಿತ್ರವನ್ನು ೧೧ನೇ ಛಾಯಾಚಿತ್ರವನ್ನು ತೆಗೆದ ಸಂದರ್ಭದಲ್ಲಿಯೆ ತೆಗೆದಿರಬಹುದೆಂದು ಊಹಿಸಲಾಗಿದೆ. ಕೆಲವರು ೧೮೯೩ ರಲ್ಲಿ ಹೈದರಾಬಾದಿನಲ್ಲಿ ತೆಗೆದಿರಬಹುದೆಂದು ಹೇಳುತ್ತಾರೆ. ಇದಕ್ಕೆ ಪುಷ್ಟೀಕರಣವಿಲ್ಲ. ಇತರ ಸಂನ್ಯಾಸಿಗಳಿಗಿಂತ ತುಂಬ ಭಿನ್ನವಾಗಿ, ಸೌಮ್ಯವಾಗಿ ಹಾಗೂ ದಂಡಧಾರಿಯಾಗಿ ಸ್ವಾಮೀಜಿ ಇಲ್ಲಿ ಕಂಗೊಳಿಸುತ್ತಾರೆ.


ಮದ್ರಾಸಿನಲ್ಲಿ ಡಿ. ಆರ್. ಬಾಲಾಜಿ ರಾವ್ ಎಂಬ ಗೃಹೀ ಭಕ್ತರಿದ್ದರು. ಅವರ ಮಗ ಡಿ. ಬಿ. ರಘುನಾಥ ರಾವ್ ಸ್ವಾಮೀಜಿಯವರನ್ನು ಸಂದರ್ಶಿಸಿದ್ದಾರೆ. ಅವರು ಹೀಗೆ ಹೇಳುತ್ತಾರೆ:

**"ಸ್ವಾಮೀಜಿಯದು ಸುದೃಢ ದೇಹ, ನಗುಮುಖ, ಹಾಸ್ಯಪ್ರಜ್ಞೆ,ಇಂಪಾದ ಧ್ವನಿ ಮುಂತಾದವುಗಳಿಂದ ಕೂಡಿದ ಬಹಳ ಆಕರ್ಷಣೀಯ ವ್ಯಕ್ತಿತ್ವ. ನಮ್ಮ ತಂದೆಯವರಿಗೆ ಪೇಟವನ್ನು ವಿವಿಧ ರೀತಿಯಲ್ಲಿ ಕಟ್ಟಿಕೊಳ್ಳುವ ಶೋಕಿಯಿತ್ತು. ನಮ್ಮ ತಂದೆ ಸ್ವಾಮೀಜಿಯವರಿಗೆ ಪೇಟಕಟ್ಟುವ ಒಂದು ಉದ್ದ ಬಟ್ಟೆಯನ್ನು ಅರ್ಪಿಸಿದ್ದರು. ಅದನ್ನೇ ಅವರು ಛಾಯಾಚಿತ್ರಗಳನ್ನು ತೆಗೆಯುವಾಗ ಪೇಟವನ್ನಾಗಿ ಧರಿಸುತ್ತಿದ್ದರು."**



ಚಿತ್ರ : ೧೨

# ವಿವೇಕಕಿರಣ



ಜಿ.ಎಸ್. ಜಯದೇವ

**ಸ್ವಾ**ಮಿ ವಿವೇಕಾನಂದರು ಜ್ಞಾನಸೂರ್ಯರು. ಅವರ ಒಂದೊಂದು ನುಡಿಯೂ ವಿಚಾರಯೋಗ್ಯವಾದುದು; ವಿಶ್ಲೇಷಣಾರ್ಹವಾದುದು; ಹತ್ತು ಹಲವು ಸಾಮಾಜಿಕ, ಆರ್ಥಿಕ, ತಾತ್ತ್ವಿಕ ಮತ್ತು ಆಧ್ಯಾತ್ಮಿಕ ಜಿಜ್ಞಾಸೆಗಳಿಗೆ ಎಡೆಮಾಡಿಕೊಡುವಂಥದ್ದು. ಹಾಗೆಯೇ ಅವರ ಮಾತುಗಳು ಮಾನವ ಜೀವನದ ಹಲವಾರು ಕ್ಷೇತ್ರಗಳ ಮೇಲೆ ಮತ್ತು ಆಯಾಮಗಳ ಬೇಲೆ ಅಪೂರ್ವ ಬೆಳಕನ್ನು ಬೀರುತ್ತವೆ; ಹೊಸ ದೃಷ್ಟಿಯನ್ನು ನೀಡುತ್ತವೆ. ಇಂಥ ಆಲೋಚನಾಲಹರಿಗಳ ಒಂದು ಅಂಕಣವನ್ನು ಈ ತಿಂಗಳಿನ ಸಂಚಿಕೆಯಿಂದ 'ವಿವೇಕಪ್ರಭ' ಆರಂಭಿಸುತ್ತಿದೆ ಎಂದು ತಿಳಿಸಲು ಬಹಳ ಅಭಿಮಾನ ಮತ್ತು ಸಂತೋಷವಾಗುತ್ತದೆ. ಸ್ವಾಮಿ ವಿವೇಕಾನಂದರ ೧೫೦ನೇ ಜಯಂತಿಯ ಶುಭಸಂದರ್ಭದಲ್ಲಿ, ತಮ್ಮ ಸಂಕ್ಷಿಪ್ತಬರಹಗಳ ಈ ಗುಚ್ಛವನ್ನು 'ವಿವೇಕಪ್ರಭ' ಪತ್ರಿಕೆಯ ಮೇಲಿನ ವಿಶೇಷ ಆತ್ಮೀಯತೆಯಿಂದ ಬರೆದುಕೊಡುತ್ತಿರುವ ಪ್ರೊ. ಜಿ.ಎಸ್. ಜಯದೇವ ಅವರು ಮೈಸೂರು ವಿಶ್ವವಿದ್ಯಾನಿಲಯದ ವಿವೇಕಾನಂದ ಪೀಠದ ಸಂದರ್ಶಕ ಪ್ರಾಧ್ಯಾಪಕ ರಾಗಿದ್ದವರು. ಸ್ವಾಮಿ ವಿವೇಕಾನಂದರ ಚಿಂತನೆಗಳನ್ನು ವಿಶ್ಲೇಷಕ ದೃಷ್ಟಿಯಿಂದ ನೋಡುವ ಅಪೂರ್ವ ಪ್ರತಿಭೆ ಅವರದು. ಶ್ರೀಯುತರು ಸಮಾಜಸೇವಾಕಾರ್ಯಕ್ಕಾಗಿ ತಮ್ಮ ಬದುಕನ್ನು ಮುಡಿಪಾಗಿಟ್ಟಿದ್ದಾರೆ. ಚಾಮರಾಜನಗರದಲ್ಲಿ 'ದೀನಬಂಧು' ಎಂಬ ಹೆಸರಿನಲ್ಲಿ ಬಡ ಮತ್ತು ಅನಾಥ ಮಕ್ಕಳಿಗೆ ಆಶ್ರಯವನ್ನು ಒದಗಿಸಿಕೊಟ್ಟಿರುವುದಲ್ಲದೆ, ಒಂದು ಉತ್ತಮ ಶಾಲೆಯನ್ನೂ ನಡೆಸುತ್ತಿದ್ದಾರೆ. ಇದಲ್ಲದೆ ನಿರಾಶ್ರಿತ ಹೆಣ್ಣುಮಕ್ಕಳಿಗಾಗಿ ಆಶ್ರಯಕೇಂದ್ರವೊಂದನ್ನೂ ನಡೆಸುತ್ತಿದ್ದಾರೆ.

## ಅಭಿವೃದ್ಧಿ ಮತ್ತು ಸಂತೋಷ

**ಮ**ನುಷ್ಯ ಸಂತೋಷವಾಗಿರುವುದು ಮುಖ್ಯವೊ ಅಥವಾ ಅವನು ಆರ್ಥಿಕ ಪ್ರಗತಿಯನ್ನು ಸಾಧಿಸುವುದು ಮುಖ್ಯವೊ? 'ಮನುಷ್ಯನ ಸಂತೋಷ' ಎಂಬುದು ಎಲ್ಲರಿಗೂ ಅರ್ಥವಾಗುವ ವಿಷಯ. ಅದೇ ಜೀವನದ ಸರ್ವಸ್ವ. 'ಆರ್ಥಿಕ ಆವಶ್ಯಕತೆ' ಎನ್ನುವುದು ಸಹ ಎಲ್ಲರಿಗೂ ತಿಳಿಯುವ ವಿಷಯವೇ. ಗೌರವಯುತವಾದ ಜೀವನ ನಡೆಸಲು ಒಂದಷ್ಟು ಹಣ ಬೇಕು. ಆದರೆ ಆರ್ಥಿಕ ತಜ್ಞರು ಪ್ರತಿಪಾದಿಸುವ ಆರ್ಥಿಕ ಪ್ರಗತಿಯ ಸಿದ್ಧಾಂತದ ಪ್ರಕಾರ ಒಟ್ಟು ಸರಾಸರಿ ಲೆಕ್ಕದಲ್ಲಿ ಹಣದ ಹೆಚ್ಚಳ ವಾದರೂ, ಅದು ಜನಸಾಮಾನ್ಯರಿಗೆ ದಕ್ಕುವುದೇ ಇಲ್ಲ. ಇದು ಆಕಾಶದಲ್ಲಿ ನೇತಾಡುವ ಮಾವಿನಹಣ್ಣಿನ ಹಾಗೆ. ಕೊನೆಗೆ ಇದು ಕೆಲವೇ ಕೆಲವರ ಪಾಲಾಗಿ ಬಹುಸಂಖ್ಯಾತರು ಬಡವರಾಗಿಯೇ ಉಳಿಯುತ್ತಾರೆ. ಹಣದ ಸಮಾನ ಹಂಚಿಕೆಯಾಗಿ ನಮಗೆ ಅಗತ್ಯಕ್ಕಿಂತ ಹೆಚ್ಚು ಹಣ ದೊರೆಯಿತು ಎಂದಿಟ್ಟುಕೊಳ್ಳಿ. ಆಗಲಾದರೂ ನಾವು ಸಂತೋಷದಿಂದಿದ್ದೇವೆ ಎಂದು ತಿಳಿಯಬಹುದೆ? ಇದೊಂದು ದೊಡ್ಡ ಪ್ರಶ್ನೆ.

ಇಂತಹ ಒಂದು ಪ್ರಶ್ನೆಯನ್ನು ಸ್ವಾಮಿ ವಿವೇಕಾನಂದರು ಸುಮಾರು ೧೨೦ ವರ್ಷಗಳ ಹಿಂದೆಯೇ ಕೇಳಿದ್ದರು. ಅವರ ಮಾತಿನ ಸಾರಾಂಶ ಹೀಗಿದೆ: **"ಈ ಪ್ರಪಂಚಕ್ಕೆ ಒಳ್ಳೆಯದನ್ನು ಮಾಡಬೇಕೆಂದು ನಾವು ಕಳೆದ ೧೦೦ ವರ್ಷಗಳಲ್ಲಿ ಏನೆಲ್ಲಾ ಮಾಡಿದ್ದೇವೆ. ಇದರ ಪರಿಣಾಮವಾಗಿ ಈ ಜಗತ್ತಿನಲ್ಲಿ ಮನುಷ್ಯನ ಸಂತೋಷದ ಮಟ್ಟ ಹೆಚ್ಚಾಗಿದೆಯೇ? ಮನುಷ್ಯರು ಹಿಂದಿಗಿಂತ ಈಗ ಹೆಚ್ಚು ಸಂತೋಷವಾಗಿದ್ದಾರೆಯೇ? ಸಂತೋಷಕ್ಕಾಗಿ ಸಾವಿರಾರು ಸಾಧನಗಳನ್ನು ಕಂಡುಹಿಡಿದಿದ್ದೇವೆ; ನಾನು ಕೇಳುತ್ತೇನೆ, ಮನುಷ್ಯರ ಸರಾಸರಿ ಸಂತೋಷ ೧೦೦ ವರ್ಷದ ಹಿಂದೆ ಇದ್ದಿದ್ದಕ್ಕಿಂತ ಈಗ ಹೆಚ್ಚಾಗಿದೆಯೆ?"**

ಇಂತಹ ಒಂದು ಮುಖ್ಯವಾದ ಪ್ರಶ್ನೆಯನ್ನು ಸ್ವಾಮಿ ವಿವೇಕಾನಂದರ ನಂತರ ಕೇಳಿದವರು ಅಮೆರಿಕನ್ನರಲ್ಲ, ಯೂರೋಪಿಯನ್ನರಲ್ಲ ಅಥವಾ ಭಾರತೀಯರೂ ಅಲ್ಲ. ಬೌದ್ಧಧರ್ಮದಲ್ಲಿ ನೆಲೆನಿಂತ, ಅಧ್ಯಾತ್ಮಮೌಲ್ಯಗಳಲ್ಲಿ ಆಳವಾದ ನಂಬಿಕೆಯುಳ್ಳ ಭೂತಾನ್ ದೇಶದ ದೊರೆ ಈ ಪ್ರಶ್ನೆಯನ್ನು ಎತ್ತಿದ. ೧೯೭೨ ರಲ್ಲಿ ಇಡೀ ಪ್ರಪಂಚ ಆರ್ಥಿಕ ಪ್ರಗತಿಯನ್ನೇ ಬದುಕಿನ ಸರ್ವಸ್ವ ಎಂದು ಗುರುತಿಸುತ್ತಿದ್ದಾಗ ಭೂತಾನಿನ ಈ ದೊರೆ, **'ಒಟ್ಟು ರಾಷ್ಟ್ರೀಯ ಸಂತಸ'** (Gross National Happiness ಅಥವಾ GNH) ಎಂಬ ಪದವನ್ನೂ ಪರಿಕಲ್ಪನೆಯನ್ನೂ ಹುಟ್ಟುಹಾಕಿದ. ಭೂತಾನೀಯರ ಪ್ರಕಾರ ಎಲ್ಲರಿಗೂ